ಅಧ್ಯಕ್ಷರು : ಕುಳಿತುಕೊಳ್ಳಿ ಎಂದರೂ ಅದೇ ಕಥೆ ಹೇಳುತ್ತೀರಲ್ಲಾ?, ಅಲಗೂರ್‌ರವರೇ ತಾವು ಪ್ರಶ್ನೆ ಕೇಳಿ.

ಹೊಸ ತಾಲ್ಲೂಕಿನ ರಚನೆ

11(2) ಶ್ರೀ ರಾಜು ಅಲಗೂರು (ನಾಗಠಾಣ) . ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸ ತಾಲ್ಲೂಕುಗಳನ್ನು ರಚನೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಆ) ಹಾಗಿದ್ದಲ್ಲಿ. ಹೊಸ ತಾಲ್ಲೂಕುಗಳನ್ನು ರಚನೆ ಮಾಡಲು ಯಾವ ಮಾನ ದಂಡಗಳನ್ನು ಅನುಸರಿಸಲಾಗುತ್ತಿದೆ.

ಇ) ಚಡಚಣದಲ್ಲಿ ನಾಡ ಕಛೇರಿ/ಇತರೆ ಆಡಳಿತ ಕಛೇರಿಗಳು ಇರುವು ದರಿಂದ ಅದನ್ನು ತಾಲ್ಲೂಕನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ : ಇದ್ದಲ್ಲಿ. ತಾಲ್ಲೂಕನ್ನಾಗಿ ಮಾಡಲು ಇರುವ ತಾಂತ್ರಿಕ ತೊಂದರೆಯೇನು·

ಈ) ಚಡಚಣವನ್ನು ತಾಲ್ಲೂಕನ್ನಾಗಿ ಮಾಡಲು ಸರ್ಕಾರಕ್ಕೆ ಎಷ್ಟು ಸಮಯ ಬೇಕಾಗುವುದು?

ಶ್ರೀ ಎ ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಹೌದು

ಆ) ಹೊಸ ತಾಲ್ಲೂಕುಗಳನ್ನು ರಚನೆ ಮಾಡಲು ಯಾವುದೇ ನಿರ್ದಿಷ್ಟವಾದ ಅಥವಾ ಅನುಸರಿಸಬಹುದಾದ ಮಾನದಂಡಗಳು ಇರುವುದಿಲ್ಲ. ಆದರೆ 1973 ನೇ ಸಾಲಿನಲ್ಲಿ ಶ್ರೀ ವಾಸುದೇವರಾವ್ ಆಯೋಗ 1984 ರಲ್ಲಿ ಶ್ರೀ ಟಿ.ಎಂ.ಹುಂಡ್ರೇಕರ್ ಸಮಿತಿ 1986 ರಲ್ಲಿ ಶ್ರೀ ಪಿ.ಸಿ.ಗದ್ದಿಗೌಡರ್ ಸಮಿತಿ ಹಾಗೂ 2007 ರಲ್ಲಿ ಶ್ರೀ ಎಂ.ಬಿ.ಪ್ರಕಾಶ್ ಸಮಿತಿಗಳು ಹೊಸ ತಾಲ್ಲೂಕುಗಳ ರಚನೆಗೆ ಶಿಫಾರಸ್ಸು ಮಾಡಿರುತ್ತವೆ. ಈ ಸಮಿತಿಗಳು

ಸಾಮಾನ್ಯವಾಗಿ ಹಾಲಿ ಇರುವ ತಾಲ್ಲೂಕುಗಳಿಂದ ಇರುವ ಅಂತರ, ಹೊಸ ತಾಲ್ಲೂಕುಗಳ ರಚನೆಗೆ ಅಲ್ಲಿಯ ಜನಸಂಖ್ಯೆ ಕ್ಷೇತ್ರದ ಭೌಗೋಳಿಕ ವಿಸ್ತೀರ್ಣ ಮುಂದಿನ ದಶಕದಲ್ಲಿ ನೀರಾವರಿ ಯೋಜನೆಗಳು, ಔದ್ಯೋಗಿಕ ಮತ್ತು ಕೃಷಿ ಕ್ಷೇತ್ರದಲ್ಲಿ ಆಗಬಹುದಾದ ಬೆಳವಣಿಗೆಗಳನ್ನು ಗಮನಿಸಿ ಹೊಸ ತಾಲ್ಲೂಕುಗಳ ರಚನೆ ಮಾಡಲು ಶಿಫಾರಸ್ಸು ಮಾಡಿರುತ್ತವೆ.

ಇ) & **ಈ**) ಮೇಲ್ಕಂಡ 4 ಸಮಿತಿಗಳಲ್ಲಿ 3 ಸಮಿತಿಗಳು ಚಡಚಣ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕೆಂದು ಶಿಫಾರಸ್ಸು ಮಾಡಿರುತ್ತವೆ. ಈ ಪಟ್ಟಣವನ್ನು ಹೊಸ ತಾಲ್ಲೂಕನ್ನಾಗಿ ರಚನೆ ಮಾಡುವ ಬಗ್ಗೆ ಸರ್ಕಾರದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟು ಕೊಂಡು ಹಂತಹಂತವಾಗಿ ಹೊಸ ತಾಲ್ಲೂಕುಗಳನ್ನು ರಚಿಸುವ ಸಂದರ್ಭದಲ್ಲಿ ಕ್ರಮ ಕೈಗೊಳ್ಳಲಾಗುವುದು.

ಶ್ರೀ ರಾಜು ಅಲಗೂರು : ಮಂತ್ರಿಗಳು ಕೊಟ್ಟಿರುವ ಉತ್ತರ ನನಗೆ ಸಮಂಜಸವಾಗಿಲ್ಲ. ಮೊದಲನೇ ಪ್ರಶ್ನೆಗೆ, ಯಾವುದೇ ಮಾನದಂಡ ಉಪಯೋಗ ಮಾಡುವುದಿಲ್ಲವೆನ್ನುವ ಮಾಹಿತಿಯನ್ನು ಕೊಟ್ಟಿದ್ದಾರೆ. ಹುಂಡೇಕಾರ್ ಮತ್ತು ಗದ್ದೀಗೌಡರ್ ಸಮಿತಿಗಳು, ಎಂ.ಬಿ. ಪ್ರಶಾಕ್ ಸಮಿತಿ ಈ ಮೂರೂ ಸಮಿತಿಗಳು ಕೂಡ ಒಂದು ತಾಲ್ಲೂಕು ರಚನೆಯಾಗಬೇಕಾದರೆ ಕೆಲವು ಮಾನದಂಡಗಳನ್ನು ಅನ್ವಯ ಮಾಡಬೇಕೆಂದು, ಅಂಥ ಅಂಶಗಳಿದ್ದಾಗ ಮಾತ್ರ ಆ ತಾಲ್ಲೂಕುಗಳನ್ನು ನೀವು ಘೋಷಣೆ ಮಾಡಬೇಕೆನ್ನುವ ವಿಚಾರವನ್ನು ಹೇಳಿವೆ. 2011ರ ಜನಸಂಖ್ಯೆಗನುಗುಣವಾಗಿ ಒಂದೂವರೆ ಲಕ್ಷ ಜನಸಂಖ್ಯೆ ಹೊಂದಿರತಕ್ಕಂಥದ್ದು...

ಅಧ್ಯಕ್ಷರು : ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ರಾಜು ಅಲಗೂರು : ಚಡಚಣವನ್ನು ಯಾವಾಗ ತಾಲ್ಲೂಕನ್ನಾಗಿ ಮಾಡುತ್ತೀರಿ?

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಹೊಸ ತಾಲ್ಲೂಕುಗಳು ಆಗಬೇಕೆಂದು ಪ್ರಶ್ನೆ ಕೇಳಿದ್ದಾರೆ. ಬಹುಶಃ ಅವರು ಕೇಳಿರುವ ಪ್ರತಿಯೊಂದಕ್ಕೂ ಕೂಡ ನಾನು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದೇನೆ. ಈಗಾಗಲೇ 4 ಸಮಿತಿಗಳು ಬಂದಿವೆ. ಕೊನೆಗೆ 2007ರಲ್ಲಿ ಎಂ.ಬಿ.ಪ್ರಕಾಶ್ ಸಮಿತಿ ಕೊಟ್ಟಿರುವ ವರದಿ ಇದು. ಆ ವರದಿಯಲ್ಲಿ ಬಹಳ ಸ್ಪಷ್ಟವಾಗಿದೆ 32 ಗ್ರಾಮಾಂತರ ತಾಲ್ಲೂಕುಗಳು 11 ನಗರ ಪ್ರದೇಶಗಳು, 40 ತಾಲ್ಲೂಕುಗಳನ್ನು ಕೊಟಬೇಕೆಂದು ಆಗಿದೆ. ಅದಾದಮೇಲೆ ಕೂಡ ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ 43 ಹೊಸ ತಾಲ್ಲೂಕುಗಳನ್ನು ಸರ್ಕಾರ ಮಾಡಬೇಕೆಂದು ಹೇಳಿ ತೀರ್ಮಾನವಾಗಿದೆ ಎಂದು ಅವರು ಘೋಷಣೆ ಮಾಡಿದ್ದರು. ಆ ವಿಷಯವನ್ನು drop ಮಾಡಿಲ್ಲ, ಅದನ್ನು ಮಾಡಬೇಕೆಂದು ಒಪ್ಪಿಕೊಂಡಿದ್ದೇವೆ. ಅದಾದಮೇಲೂ ಕೂಡ ಹೊಸ ತಾಲ್ಲೂಕುಗಳನ್ನು ಮಾಡಬೇಕೆನ್ನತಕ್ಕಂಥದ್ದಕ್ಕೆ ಎಲ್ಲಾ ಕಡೆಯಿಂದ ಒತ್ತಡ ಬರುತ್ತಿದೆ. ಹೊಸ ತಾಲ್ಲೂಕುಗಳನ್ನು ಮಾಡುವಾಗ ಆಯಾ ಸಮಿತಿಗಳು ಯಾವ ಮಾನದಂಡವನ್ನು ಅನುಸರಿಸಬೇಕೆಂದು ಹೇಳಿವೆ? ಅದರಂತೆ ಅನುಸರಿಸಿ ಮಾಡಿದ್ದೇವೆ ಉತ್ತರದಲ್ಲಿ ಸ್ಪಷ್ಟವಾಗಿ ಕೊಟ್ಟಿದ್ದೇವೆ. ಯಾವ ಮಾನದಂಡಗಳನ್ನನುಸರಿಸಿ 43 ತಾಲ್ಲೂಕುಗಳನ್ನು ಮಾಡಿದ್ದಾರೆ, 4 ಸಮಿತಿಗಳು ಕೂಡ ಏನೇನು ಶಿಫಾರಸ್ಸು ಮಾಡಿವೆ, ಅಂತಿಮವಾದ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಜಗದೀಶ್ ಶೆಟ್ಟರ್ ಕೂಡ 6 ತಾಲ್ಲೂಕುಗಳನ್ನು ಬಿಟ್ಟು ತಮಗೆ ಬೇಕುದದ್ದನ್ನು ಘೋಷಣೆ ಮಾಡಿಕೊಂಡಿದ್ದಾರೆ. ಈಗ ನಾನೊಂದು ಮಾತು ಹೇಳುತ್ತೇನೆ. 43 ತಾಲ್ಲೂಕುಗಳ ಬಗ್ಗೆ ಕೂಡ ಎಂ.ಬಿ.ಪ್ರಕಾಶ್‌ರವರ ಸಮಿತಿಯ ವರಿದಿಯಲ್ಲಿ ಕೂಡ ಸ್ಪಷ್ಟವಾಗಿ ಹೇಳಿದ್ದಾರೆ. ಒಂದು ತಾಲ್ಲೂಕನ್ನು ಮಾಡುವಾಗ 20 ಕೋಟಿ ರೂ. ಬೇಕಾಗುತ್ತದೆ. 43 ತಾಲ್ಲೂಕು X 20 ಕೋಟಿ ರೂ. ಇಷ್ಟೊಂದು ಹಣವನ್ನು ಒಂದೇ ಸಾರಿಗೆ ಕೊಡುವುದಕ್ಕಾಗುವುದಿಲ್ಲಾ. ಹೊಸ ತಾಲ್ಲೂಕು ಎಂದು ಅನುಷ್ಟಾನ ಮಾಡುವುದಕ್ಕೆ ಘೋಷಣೆ ಮಾಡಿರತಕ್ಕಂಥದ್ದನ್ನು, ನಮ್ಮ ಆರ್ಥಿಕ ಸ್ಥಿತಿಗತಿಗಳನ್ನು ನೋಡಿಕೊಂಡು ಹಂತ ಹಂತವಾಗಿ ನಾವು ಮಾಡಿಕೊಂಡು ಹೋಗೋಣವೆನ್ನುವ ತೀರ್ಮಾನ ಕೂಡ ಆಗಿದೆ. ಆ 43 ತಾಲ್ಲೂಕುಗಳನ್ನು ಕೂಡ ಮಾಡುತ್ತೇವೆ. ಅದನ್ನು ಕೈಬಿಟ್ಟಿಲ್ಲ

ವೆನ್ನುವುದನ್ನು ಹೇಳುತ್ತೇನೆ. ಹೊಸ ತಾಲ್ಲೂಕುಗಳನ್ನು ಮಾಡಬೇಕೆಂದರೆ, ಈಗ ಅದನ್ನು ಮಾಡತಕ್ಕಂಥ ಆಲೋಚನೆ ನಮ್ಮಲ್ಲಿ ಯಾವುದೂ ಇಲ್ಲ.

ಶ್ರೀ ರಾಜು ಅಲಗೂರು : ಚಡಚಣ ತಾಲ್ಲೂಕನ್ನು ಮಾಡಲು ನಿರ್ದಿಷ್ಟವಾಗಿ ಎಷ್ಟು ಸಮಯ ತೆಗೆದುಕೊಳ್ಳುತ್ತೀರಿ? ನೀವು ಯಾವಾಗ ಮಾಡುತ್ತೀರಿ ಎಂಬುದನ್ನು ಹೇಳಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು : ಯಾವಾಗ ಎಂದು ಹೇಳಿ. ನಾಳೆ ಮಾಡುತ್ತೀರೋ ಕೈಬಿಟ್ಟಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಇಂಥ ದಿವಸ ಈಗಲೇ ಮಾಡ ಬೇಕೆಂದು ಹೇಗೆ ಹೇಳುತ್ತಾರೆ?

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ನಾನು ಸ್ಪಷ್ಟವಾಗಿ ಹೇಳಿದ್ದೇನೆ ಮತ್ತು ಕಾರಣವನ್ನೂ ಕೂಡ ಹೇಳಿದ್ದೇನೆ.

ಶ್ರೀ ಕೆ. ಗೋಪಾಲ ಪೂಜಾರಿ : ಬೈಂದೂರು ಕ್ಷೇತ್ರದಲ್ಲಿ Special Tahasildar ಕಛೇರಿಯಾಗಿದೆ. ಅದನ್ನು ತಾಲ್ಲೂಕೆಂದು ಮಾಡಬೇಕು.

ಶ್ರೀ ಜಗದೀಶ್ ಶೆಟ್ಟರ್ : 43 ಹೊಸ ತಾಲ್ಲೂಕು ಘೋಷಣೆ ಮಾಡಿ ದ್ದೇವೆ. ಅದಕ್ಕೆ 2-2 ಕೋಟಿ ರೂ.ಗಳ ಅನುದಾನವನ್ನೂ ಕೊಟ್ಟಿದ್ದೇವೆ. ಒಂದೇ ಸಲಕ್ಕೆ 20-20 ಕೋಟಿ ರೂ.ಗಳಂತೆ ಕೊಟ್ಟು ನೀವು ಒಂದೇ ಸಲಕ್ಕೆ Formation ಮಾಡುವುದಕ್ಕೆ ಸಾಧ್ಯವಿಲ್ಲ. ನೀವು ಇಚ್ಛಾಶಕ್ತಿ ತೋರಿಸಿ. ಇವತ್ತು ಉತ್ತರ ಕರ್ನಾಟಕದಲ್ಲಿ ಅಧಿವೇಶನ ನಡೆಯುತ್ತಿದೆ, ಆ 43 ತಾಲ್ಲೂಕುಗಳಲ್ಲಿ ಅದರಲ್ಲಿ 36 ಕೇಂದ್ರಗಳು ಉತ್ತರ ಕರ್ನಾಟಕದಲ್ಲಿಯೇ ಇವೆ. ಇದನ್ನು ತಾವು ಅರ್ಥ ಮಾಡಿಕೊಳ್ಳಿ, ಇಲ್ಲೆಲ್ಲ ದೊಡ್ಡ ದೊಡ್ಡ ತಾಲ್ಲೂಕು ಇದ್ದಾವೆ. ಆದಷ್ಟು ಸುಧಾರಣೆಯಾಗಬೇಕು. ಅದಕ್ಕೆ ಇಚ್ಛಾಶಕ್ತಿ ಪ್ರದರ್ಶನ ಮಾಡಿ, ತಕ್ಷಣವೇ ಅನುಷ್ಠಾನ ಮಾಡುವ ಕೆಲಸ ಮಾಡಿ. ಹಾಗಾದರೆ, Time bound fix ಮಾಡಿ. ನೀವು ಪ್ರತಿ ಸಲ ಹೇಳುತ್ತಿದ್ದೀರಿ. ಪ್ರತಿ ಸಲ, ನಾವು Consideration ಮಾಡು ತ್ತೇವೆ, drop ಮಾಡಿಲ್ಲಾ, ಎಂದು ಹೇಳುತ್ತಾರೆ. ಇನ್ನೂ ನಿಮಗೆ 6 ತಿಂಗಳು ಬೇಕೆ? ಇನ್ನೂ ಒಂದು ವರ್ಷ ಬೇಕೆ? ಅಥವಾ ಮಾಡುವುದಿಲ್ಲವೆನ್ನುವು ದಾದರೆ ಅದನ್ನಾದರೂ ಸ್ಪಷ್ಟವಾಗಿ ಹೇಳಿ.

ಶ್ರೀ ಎ ಶ್ರೀನಿವಾಸ ಪ್ರಸಾದ್ : ಶೆಟ್ಟರ್‌ರವರೆ, ಆಡಳಿತಾತ್ಮಕವಾದ ದೃಷ್ಟಿಯಿಂದ, ಜನರ ಕೈಗೆ ಹತ್ತಿರದಲ್ಲಿ ಆಡಳಿತ ಸಿಗಬೇಕು ಎನ್ನುವ ದೃಷ್ಟಿಯಿಂದ ಬಹಳ ಸ್ಪಷ್ಟವಾಗಿ ಅದರ ಬಗ್ಗೆ ನಮಗೆ Commitment ಕಾಳಜಿ ಕೂಡ ಇದೆ. ಅದರ ಬಗ್ಗೆ ಎರಡನೇ ಪ್ರಶ್ನೆಯೇ ಇಲ್ಲ. ಆದರೆ, ಎಂ.ಬಿ.ಪ್ರಕಾಶ್ ಸಮಿತಿಯಲ್ಲಿ, ಉತ್ತರ ಕರ್ನಾಟಕಕ್ಕೆ ಕೊಟ್ಟಿದ್ದಾರೆ, ಇನ್ನೊಂದು ಕಡೆ ಕೊಟ್ಟಿಲ್ಲ ಎನ್ನುವುದಿಲ್ಲ ಸಮಗ್ರವಾಗಿ ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ ಸಾಧ್ಯವಿದೆ, ಎಲ್ಲೆಲ್ಲಿ ಅವಶ್ಯಕತೆ ಇದೆಯೋ, ಅಲ್ಲಿ ಹೊಸ ತಾಲ್ಲೂಕುಗಳು ರಚನೆಯಾಗಬೇಕೆನ್ನುವುದರ ಬಗ್ಗೆ ತೀರ್ಮಾನವಾಗಿದೆ, ವರದಿ ಕೂಡ ಬಂದಿದೆ. ತಾವು ಘೋಷಣೆ ಮಾಡಿದ್ದೀರಿ. ನಾವು ಯಾವುದೂ ಕೈಬಿಟ್ಟಿಲ್ಲ. ತಕ್ಷಣದಲ್ಲಿ ಅದರ ಬಗ್ಗೆ ತಾತ್ಸಾರ ಮಾಡುವುದಿಲ್ಲ, ಕೈಬಿಡುವುದಿಲ್ಲ. Political will ಬಗ್ಗೆ ಮಾತನಾಡಿದ್ದೀರಿ, ನಮಗೆ ರಾಜಕೀಯ ಇಚ್ಛಾಶಕ್ತಿ ತುಂಬಾ ಇದೆ. ನಾವು ಬಂದ 6 ತಿಂಗಳಲ್ಲಿ ಏನು ಮಾಡಿದ್ದೇವೆ ಎಂಬ ಬಗ್ಗೆ ಗೊತ್ತಿದೆ, ಅದರ ಬಗ್ಗೆ ಪ್ರಶ್ನೆ ಮಾಡುವುದು ಬೇಡ ಅದನ್ನು ಮಾಡಿ ತೋರಿಸಿದ್ದೇವೆ. ಅದರ ಬಗ್ಗೆ ಮಾತನಾಡಬೇಡಿ. ಖಂಡಿತ ಮಾಡುತ್ತೇವೆ. ನಮ್ಮ ಮೇಲೆ ನಂಬಿಕೆ ಇಡಿ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಗುರುಪಾದಪ್ಪನವರು.

(ಗೊಂದಲ)

ಅಧ್ಯಕ್ಷರು : ಏನು ಇಲ್ಲ ಬಿಡಿ, ಆಗಿದೆ. ಹೇಳಿದ್ದಾರೆ.

ಶ್ರೀ ಬಿ.ಬಿ. ನಿಂಗಯ್ಯ : ಅವರು ಮಾತನಾಡುವ ಸಂದರ್ಭದಲ್ಲಿ ಹೊಸದಾಗಿ ತಾಲ್ಲೂಕುಗಳನ್ನು ಮಾಡುವ ಆಲೋಚನೆ ಇಲ್ಲ, ಈಗೇನು ಮಾಡಿದ್ದಾರೆ, ಸಮಿತಿಗಳಲ್ಲಿ ಏನು ಕೊಟ್ಟಿದ್ದಾರೆ, ಅಂಥ ತಾಲ್ಲೂಕುಗಳನ್ನು ಮಾತ್ರ ಮಾಡುತ್ತೇವೆಂದು ಹೇಳಿದ್ದಾರೆ. ಮೂಡಿಗೆರೆ ತಾಲ್ಲೂಕಿನಿಂದ ಸುಮಾರು 100 ಕಿ.ಮೀ. ದೂರದಲ್ಲಿ ಕಳಸ ಇದೆ.

ಅಧ್ಯಕ್ಷರು : Specific ಆಗಿ ಕೇಳುವುದಿದ್ದರೆ ಕೇಳಿ.

(ಗೊಂದಲ)

ಶ್ರೀ ಬಿ.ಬಿ ನಿಂಗಯ್ಯ : ಮಲೆನಾಡಿನಲ್ಲಿ ವಿಸ್ತಾರವಾದ ಪ್ರದೇಶವಿರುವುದು ತಮಗೆ ಗೊತ್ತಿರುವ ವಿಷಯ. ಕಳಸಾವನ್ನೂ ಕೂಡ ತಾಲ್ಲೂಕನ್ನಾಗಿ ಮಾಡಿಕೊಡಬೇಕೆಂದು ನಾನು ವಿನಂತಿಸುತ್ತೇನೆ.

ಅಧ್ಯಕ್ಷರು : ಪರಿಶೀಲನೆ ಮಾಡುತ್ತೇವೆ ಎಂದು ಹೇಳಿ

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಪರಿಶೀಲನೆ ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು :It is a policy matter It is under consideration

Excessive Rainfall and drought

12(161) ಶ್ರೀ ಡಾ.ಗುರುಪಾದಪ್ಪ ನಾಗಮಾರಪ್ಪಳಿ (ಬೀದರ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಸಂಭವಿಸಿರುವ ಅತೀವೃಷ್ಟಿ ಮತ್ತು ಅನಾವೃಷ್ಟಿಯಿಂದ ಇಲ್ಲಿಯವರೆವಿಗೂ ವಿವಿಧ ಜಿಲ್ಲೆಗಳಿಗೆ ಸಂಭವಿಸಿರುವ ನಷ್ಟದ ಮೊತ್ತವೆಷ್ಟು (ನಷ್ಟದ ಸಂಪೂರ್ಣ ಮಾಹಿತಿಯನ್ನು ಜಿಲ್ಲಾವಾರು ಅಂಕಿ ಅಂಶಗಳಲ್ಲಿ ಒದಗಿಸುವುದು)

ಆ) ಸರ್ಕಾರ ಈ ನಷ್ಟವನ್ನು ತುಂಬಿಕೊಡಲು ತನ್ನ ಪಾಲಿನ ಎಷ್ಟು ಹಣವನ್ನು ಇಲ್ಲಿಯವರೆವಿಗೂ ಪ್ರತಿ ಜಿಲ್ಲೆಗೆ ಬಿಡುಗಡೆ ಮಾಡಿದೆ. ಈ ಹಣದಿಂದ ಪ್ರತಿ ಜಿಲ್ಲೆಯಲ್ಲಿ ಕೈಗೊಂಡಿರುವ ಪರಿಹಾರ ಕಾರ್ಯಗಳೇನು (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

ಇ) ಕೇಂದ್ರ ಸರ್ಕಾರದ ಪ್ರತಿನಿಧಿಗಳ ತಂಡ ಇತ್ತೀಚಿಗೆ ರಾಜ್ಯದ ಯಾವ ಜಿಲ್ಲೆಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ರಾಜ್ಯ ಸರ್ಕಾರವು ಕೇಂದ್ರದಿಂದ ಎಷ್ಟು ಮೊತ್ತದ ನೆರವನ್ನು ಕೋರಿ ಪ್ರಸ್ತಾವನೆ ಸಲ್ಲಿಸಿದೆ: